## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ದಿವಂಗತ ಸತ್ಯನಾರಾಯಣ ರವರ ಪತ್ನಿ ಶ್ರೀಮತಿ ಲಕ್ಷ್ಮೀದೇವಿ ಇವರಿಗೆ ಡಿ.ಸಿ.ಆರ್.ಜಿ. ಮೊತ್ತವನ್ನು ಪಾವತಿಸುವಲ್ಲಿ ಆದ ವಿಳಂಬದ ಅವಧಿಗೆ ಬಡ್ಡಿ ನೀಡುವ ಬಗ್ಗೆ – ಆದೇಶ.

**ಓದಲಾಗಿದೆ:-**

1. ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ. ಜಸಂಇ 29 ಸೇರನಿ 2003, ದಿನಾಂಕ. 05-10-2010.
2. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ. 5093/2004, ದಿನಾಂಕ. 21-04-2010
3. ನಿಂದನಾ ಅರ್ಜಿ ಸಂಖ್ಯೆ. 38/2012, ದಿನಾಂಕ. 03-02-2012.
4. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಳಗಾವಿ ಇವರ ಪತ್ರ ಸಂಖ್ಯೆ. ಪಂರಾಇಂವಿ/ಬೆ/ಸಿ-2/2011-12, ದಿನಾಂಕ. 22-03-2012.

*****

**ಪ್ರಸ್ತಾವನೆ:**

ಶ್ರೀ ಎಸ್.ಸತ್ಯನಾರಾಯಣ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬೈಲಹೊಂಗಲ ಇಲ್ಲಿ 2001ರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನಂತರ ಕಾರ್ಯಪಾಲಕ ಇಂಜಿನಿಯರ್ ಆಗಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯ ಕೃಷ್ಣ ಜಲ ಭಾಗ್ಯ ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ರೈಲ್ವೆ ಅಪಘಾತದಲ್ಲಿ ನಿಧನರಾಗಿರುತ್ತಾರೆ. ಈ ಅಧಿಕಾರಿ ಬೈಲಹೊಂಗಲದ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಉಗ್ರಾಣ ಸಾಮಗ್ರಿಯಲ್ಲಿ ರೂ. 15,42,900-00 ಗಳ ಕೊರತೆ ಕಂಡು ಬಂದಿದ್ದರಿಂದ ಅವರ ಡಿ.ಸಿ.ಆರ್.ಜಿ. ಹಣದಲ್ಲಿ ರೂ. 2.50 ಲಕ್ಷಗಳ ಹಣವನ್ನು ತಡೆಹಿಡಿಯಲು ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಳಗಾವಿ ಇವರು ಮಹಾಲೇಖಪಾಲರನ್ನು ಕೋರಿದ್ದು, ಅದರಂತೆ ಮಹಾಲೇಖಪಾಲರು ತಡೆಹಿಡಿದಿದ್ದು, ನಂತರ ಶ್ರೀಮತಿ ಎಸ್.ಲಕ್ಷ್ಮೀದೇವಿ ಇವರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಿಸಿದ್ದ ಅರ್ಜಿ ಸಂಖ್ಯೆ. 5093/2004ರ ಪ್ರಕರಣದಲ್ಲಿ ದಿವಂಗತ ಎಸ್. ಸತ್ಯನಾರಾಯಣ ರವರ ಪತ್ನಿಗೆ ನಿವೃತ್ತಿ ಸೌಲಭ್ಯಗಳನ್ನು ದಿನಾಂಕ. 1-7-2001 ರಿಂದ ಅನ್ವಯವಾಗುವಂತೆ ಶೇಕಡಾ 12ರ ಬಡ್ಡಿಯೊಂದಿಗೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಯ ಆದೇಶದ ದಿನಾಂಕದಿಂದ 3 ತಿಂಗಳೊಳಗಾಗಿ ಪಾವತಿಸುವಂತೆ ತೀರ್ಪು ನೀಡಿದ್ದು, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಆದೇಶದ ಪ್ರಕಾರ ಕ್ರಮವಹಿಸುವಂತೆ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ. 05-10-2010ರಲ್ಲಿ ಕೋರಿದ್ದರು.

ಈ ರೀತಿ ತಡವಾಗಿ ಪಾವತಿಸಿದ್ದ ನಿವೃತ್ತಿ ಸೌಲಭ್ಯಗಳ ಮೇಲೆ ಬಡ್ಡಿಯನ್ನು ಪಾವತಿ ಮಾಡುವಂತೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸೂಕ್ತ ನಿರ್ದೇಶನ ನೀಡಲು ಕೋರಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಶ್ರೀಮತಿ ಎಸ್. ಲಕ್ಷ್ಮೀದೇವಿರವರು ಅರ್ಜಿ ಸಂಖ್ಯೆ. 5093/2004ನ್ನು ದಾಖಲಿಸಿದ್ದರು. ಮಾನ್ಯ ನ್ಯಾಯ ಮಂಡಳಿಯು ಮೇಲೆ ಕ್ರಮ ಸಂಖ್ಯೆ (2)ರಲ್ಲಿ

---2

ಓದಲಾದ ದಿನಾಂಕ. 21-04-2010ರ ಆದೇಶದಲ್ಲಿ ಅರ್ಜಿದಾರರಿಗೆ ನಿವೃತ್ತಿ ಸೌಲಭ್ಯಗಳನ್ನು ಪಾವತಿಸಲು ಆದ ವಿಳಂಬದ ಅವಧಿಗೆ ದಿನಾಂಕ. 1-7-2001 ರಿಂದ ಶೇಕಡಾ 12ರ ದರದಲ್ಲಿ ಬಡ್ಡಿ ಪಾವತಿಸುವಂತೆ ಆದೇಶಿಸಿರುತ್ತದೆ.

ಶ್ರೀಮತಿ ಎಸ್. ಲಕ್ಷ್ಮೀದೇವಿ ರವರು ದಿನಾಂಕ. 21-04-2014ರ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಆದೇಶವನ್ನು ನಿಗಧಿತ ಅವಧಿಯೊಳಗೆ ಜಾರಿಗೊಳಿಸಿಲ್ಲವೆಂಬ ಕಾರಣಗಳಿಂದ ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ. 3-2-2012ರಂದು ನಿಂದನಾ ಅರ್ಜಿಯನ್ನು ದಾಖಲಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ದಿನಾಂಕ. 22-03-2012ರಲ್ಲಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಳಗಾವಿ ರವರು ಶ್ರೀಮತಿ ಎಸ್.ಲಕ್ಷ್ಮೀದೇವಿ ರವರಿಗೆ ಡಿ.ಸಿ.ಆರ್.ಜಿ. ಮೊತ್ತ ರೂ. 2.50 ಲಕ್ಷಗಳನ್ನು ದಿನಾಂಕ. 5-3-2012ರಂದು ಸಂದಾಯ ಮಾಡಲಾಗಿದೆ ಎಂದು ಹಾಗೂ ದಿನಾಂಕ. 1-7-2001 ರಿಂದ 29-02-2012ರವರೆಗಿನ ಅವಧಿಗೆ ಶೇಕಡಾ 12 ರಂತೆ ಬಡ್ಡಿಯನ್ನು ಖಜಾನೆಯಿಂದ ಡ್ರಾ ಮಾಡಿ ಸಂದಾಯ ಮಾಡುವ ಕುರಿತು ಸರ್ಕಾರದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಳಗಾವಿ ರವರು ಮೇಲೆ ಕ್ರಮ ಸಂಖ್ಯೆ. (5)ರಲ್ಲಿ ಓದಲಾದ ದಿನಾಂಕ. 29-03-2012ರ ಪತ್ರದಲ್ಲಿ ಶ್ರೀಮತಿ ಲಕ್ಷ್ಮೀದೇವಿ ರವರಿಗೆ ತಡವಾಗಿ ಸಂದಾಯ ಮಾಡಿದ ಡಿ.ಸಿ.ಆರ್.ಜಿ. ಮೊತ್ತದ ಮೇಲೆ ಬಡ್ಡಿಯನ್ನು ದಿನಾಂಕ. 1-7-2001 ರಿಂದ 20-08-2003 ರವರೆಗೆ ಶೇಕಡಾ 12ರಂತೆ ರೂ. 64,273.97 ಮತ್ತು ದಿನಾಂಕ. 21-08-2003 ರಿಂದ 31-01-2012 ರವರೆಗೆ ಶೇಕಡಾ 8 ರಂತೆ ರೂ. 1,68,931.50 ಒಟ್ಟು ರೂ. 2,33,205.47 ಗಳಾಗುತ್ತದೆ ಎಂದು ವರದಿ ಮಾಡಿರುತ್ತಾರೆ.

ಈ ಎಲ್ಲಾ ಬೆಳವಣಿಗೆಗಳ ನೆಲೆಯಲ್ಲಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಸರ್ಕಾರಿ ಆದೇಶ ಸಂಖ್ಯೆ. ಆಇ /(ವಿ)/199/ ಪಿಇಎನ್/93, ದಿನಾಂಕ.13-09-1994ರನ್ವಯ ಶ್ರೀಮತಿ ಎಸ್.ಲಕ್ಷ್ಮೀದೇವಿ ಇವರಿಗೆ ತಡವಾಗಿ ಪಾವತಿಸಿರುವ ಡಿ.ಸಿ.ಆರ್.ಜಿ. ಮೊತ್ತಕ್ಕೆ ಬಡ್ಡಿ ನೀಡಲು ು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ. ಗ್ರಾಅಪ 310 ಜಿಪಅ 2010, ಬೆಂಗಳೂರು, ದಿನಾಂಕ.29-03-2012**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ದಿವಂಗತ ಎಸ್. ಸತ್ಯನಾರಾಯಣರವರ ಪತ್ನಿ ಶ್ರೀಮತಿ ಎಸ್. ಲಕ್ಷ್ಮೀದೇವಿ ಇವರಿಗೆ ಡಿ.ಸಿ.ಆರ್.ಜಿ. ಮೊತ್ತವನ್ನು ಪಾವತಿಸುವಲ್ಲಿ ಆದ ವಿಳಂಬದ ಅವಧಿಗೆ ಬಡ್ಡಿ ಪಾವತಿಸಲು ಈ ಕೆಳಕಂಡಂತೆ ಸರ್ಕಾರದ ಮಂಜೂರಾತಿ ನೀಡಿದೆ.

| ಅವಧಿ | ಡಿ.ಸಿ.ಆರ್.ಜಿ. ಮೊತ್ತ | ಬಡ್ಡಿಯ ದರ | ಬಡ್ಡಿ |
|---|---|---|---|
| ದಿನಾಂಕ: 1-7-2001 ರಿಂದ 20-08-2003 ರವರೆಗೆ | ರೂ. 2,50,000/- | ಶೇ. 12 | ರೂ: 64,273.97 |
| ದಿನಾಂಕ. 21-08-2003 ರಿಂದ 31-01-2012 ರವರೆಗೆ | | ಶೇ. 8 | ರೂ: 1,68,931.50 |
| | ಒಟ್ಟು: | | ರೂ: 2,33,205.47 |

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ. ಆಇ /(ವಿ)/199/ ಪಿಇಎನ್/93, ದಿನಾಂಕ. 13-09-1994ರ ಅನ್ವಯ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ. ಆಇ (ವಿ) 52 ಪಿಇಎನ್-1 2012, ದಿನಾಂಕ. 29-03-2012ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

29/3/2012
(ಎನ್.ವೈ.ಸಾಗರ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

29/2/12

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ಸರ್ಕಾರದ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಖಜಾನೆ ನಿರ್ದೇಶಕರು, ಬೆಂಗಳೂರು.
4. ಉಪ ನಿರ್ದೇಶಕರು, ಜಿಲ್ಲಾ ಖಜಾನೆ, ಬೆಳಗಾವಿ.
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ರಿಸಾಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು,
6. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ., ರಾಜಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು.
7. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ
9. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಳಗಾವಿ
10. ಸರ್ಕಾರಿ ವಕೀಲರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬಿ.ಡಿ.ಎ. ಕಾಂಪ್ಲೆಕ್ಸ್, ಇಂದಿರಾನಗರ, ಬೆಂಗಳೂರು – ನಿಂದನಾ ಅರ್ಜಿ ಸಂಖ್ಯೆ. 38/2012, ದಿನಾಂಕ.03-02-2012. (ಅರ್ಜಿ ಸಂಖ್ಯೆ. 5093/2004, ದಿನಾಂಕ. 21-04-2010ರ ತೀರ್ಪು)
11. ಶ್ರೀಮತಿ ಎಸ್. ಲಕ್ಷ್ಮೀದೇವಿ, ದಿವಂಗತ ಎಸ್. ಸತ್ಯನಾರಾಯಣ ರವರ ಪತ್ನಿ ಕೇರಾಫ್ ಸಿದ್ದಪ್ಪ, ನಂ.9, 2ನೇ ಹಂತ, ಕೆ.ಹೆಚ್.ಬಿ.ಕಾಲೋನಿ, ಹೊಳಲ್ಕೆರೆ ರಸ್ತೆ, ಚಿತ್ರದುರ್ಗ.
12. ಗ್ರಾ.ಅ.ಪಂ.ಇಲಾಖೆಯ ಸರ್ಕಾರದ ಪ್ರದಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್)/ ಉಪ ಕಾರ್ಯದರ್ಶಿ ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
13. ರಕ್ಷಾ ಕಡತ / ಮಾಹಿತಿ ಕೇಂದ್ರ/ ಹೆಚ್ಚುವರಿ ಪ್ರತಿಗಳು.